ಸಂಗತಿಗಳನ್ನು ತಾವೂ ಕೂಡ ಸೂಕ್ಷ್ಮವಾಗಿ ತನಿಖೆ ಮಾಡಿ ಎಲ್ಲಿ ದೋಷಗಳಿವೆ ಎಂದು ನೋಡಬೇಕೆಂದು ಆಗ್ರಹಿಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತ: ಮಾನ್ಯ ಅಧ್ಯಕ್ಷರೆ ಇದಕ್ಕೆ ಉತ್ತರ ಇಲ್ಲವೇ?

ಅಧ್ಯಕ್ಷರು : ಅವರು ಎಲ್ಲಿ ಹೇಳುತ್ತಾರೆ?

ಶ್ರೀ ಕಿಮ್ಮನೆ ರತ್ನಾಕರ್ : ನಾನು ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರೆ, ಇದು ಬಹಳ Sensitive issue. ಮಾನ್ಯ ಸದಸ್ಯರು ಹೇಳಿರುವುದನ್ನು ಗಮನಿಸಿ ಸಂಬಂಧಪಟ್ಟವರನ್ನು ಕರೆಸಿ parade ಮಾಡಿ ಕ್ರಮವನ್ನು ತೆಗೆದುಕೊಳ್ಳಿ,

ಶ್ರೀ ಕಿಮ್ಮನೆ ರತ್ನಾಕರ್ : ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಕಿಮ್ಮನೆ ರತ್ನಾಕರ್ : ಪೊಲೀಸ್ ಇಲಾಖೆಯವರೂ ಸಹ ಕ್ರಮವನ್ನು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು : ಮಾನ್ಯ ದತ್ತಾರವರು ಮಾತನಾಡುವುದು.

ಶ್ರೀ ವೈ.ಎಸ್.ವಿ. ದತ್ತ: ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು : ಒಂದು ನಿಮಿಷ ಮಾನ್ಯ ದತ್ತರವರೆ, ಇದು policy matter ಇರುವುದರಿಂದ ಸ್ವಲ್ಪ ವಿವರವಾದ ಚರ್ಚೆಯಾಗವೇಕಾಗಿದೆ. ಆದುದರಿಂದ ಅದಕ್ಕೆ ಪ್ರತ್ಯೇಕವಾದ ಚರ್ಚೆಗೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ.

2. ವಿಷಯ: ಅನ್ನಭಾಗ್ಯ ಯೋಜನೆ ಹಾಗೂ ಪಡಿತರ ಚೀಟಿ ವಿತರಣೆ ಬಗ್ಗೆ.

ಶ್ರೀ ವೈ.ಎಸ್.ವಿ. ದತ್ತ (ಕಡೂರು): ಮಾನ್ಯ ಅಧ್ಯಕ್ಷರೆ, ನಾನು ಹೇಳಿಬಿಡುತ್ತೇನೆ, ಆನಂತರ ತಾವು ಹೇಳಿ, ತಾವು ಹೇಳಿದ್ದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಸರ್ಕಾರ 'ಅನ್ನ ಭಾಗ್ಯ ಯೋಜನೆ' ತಂದಿರುವುದು ಒಂದು ಮಹತ್ವದ ಯೋಜನೆ . ನಾವೂ ಕೂಡ ಕೊಂಡಾಡಿದ್ದೇವೆ. ಆದರೆ ನಮ್ಮ ಹಳ್ಳಿ ಕಡೆ ಒಂದು ಗಾದೆ ಮಾತು ಇದೆ.

'ಅವಸರದಲ್ಲಿ ಅಜ್ಜಿ ಮೈ ನೆರೆದಳು' ಎನ್ನುವ ಕಥೆಯಾಗಿದೆ. ಹಾಗಾಗಿ ಈ ಏನಾಗಿದೆ ಎಂದರೆ, ಪಡಿತರ ವಿತರಣೆಯಲ್ಲಿ ಅದನ್ನು ನಿಭಾಯಿಸಲು ಆಗದೇ ಸರ್ಕಾರ ದಿನಕ್ಕೊಂದು ಕಾನೂನು ಮಾಡುತ್ತಿದೆ. ಆಹಾರ ಸಚಿವರು ಸದನದಲ್ಲಿ ಇಲ್ಲ. ವ್ಯಕ್ತಿಗತವಾಗಿ ಅವರ ಬಗ್ಗೆ ನನಗೆ ಗೌರವವಿದೆ. ಉತ್ಸಾಹ ಇದೆ. ಯುವಕರಿದ್ದಾರೆ ಎಂದು ಅಂದುಕೊಂಡೆವು. ದಿನಕ್ಕೊಂದು ಕಾನೂನು, ಯಾವ ಸೀಮೆಯ ಕಾನೂನು ಮಾಡುತ್ತಾರೆ ಎಂದರೆ, ಇಲ್ಲಿ ಯಾರೋ IAS Officer A.C. Room ನಲ್ಲಿ ಕುಳಿತುಕೊಳ್ಳುತ್ತಾರೆ. ಅವರಿಗೆ ತಾಲ್ಲೂಕು ಕಛೇರಿ ಗೊತ್ತಿಲ್ಲ. ಹರಕು ಶರ್ಟ್, ಕೊಳಕು ಪಂಚೆ ಹಾಕಿಕೊಂಡಿರುವವರ ಬಗ್ಗೆ ಗೊತ್ತಿಲ್ಲ.

ಅಧ್ಯಕ್ಷರು : ತಾವು ವಿಷಯಕ್ಕೆ ಬನ್ನಿ.

ಶ್ರೀ ವೈ.ಎಸ್.ವಿ. ದತ್ತ : ಈಗ ಮೂರು ದಿನದ ಕೆಳಗೆ ಪಡಿತರ ವಿತರಕರು ನಾವು ಸರಬರಾಜು ಮಾಡವುದಿಲ್ಲವೆಂದು Strike ಮಾಡಿಕೊಂಡು ಕುಳಿತುಕೊಂಡಿದ್ದಾರೆ, ಆ ರೀತಿ ತೊಂದರೆಯಾಗಿದೆ. ಎರಡನೆಯದಾಗಿ ಪಡಿತರ ಚೀಟಿ ತೆಗೆದುಕೊಳ್ಳುವುದಕ್ಕೆ ಅವರು ಯಾರೋ IAS Officer ಒಂದು ಕಾನೂನು ಮಾಡಿದ್ದಾರಂತೆ. ಹಳ್ಳಿ ರೈತರೆಲ್ಲಾ ಮೊಬೈಲ್‌ನಲ್ಲಿ ಎಸ್.ಎಂ.ಎಸ್. ಕಳುಹಿಸಬೇಕಂತೆ. ಹಳ್ಳಿ ರೈತರು, ಬಡತನ ರೇಖೆ ಕೆಳಗಿರುವವರು ಪಡಿತರ ಚೀಟಿಗೆ ಅವರವರ ಮೊಬೈಲ್‌ನಲ್ಲಿ EPIC Card, ಆಧಾರ್ ಸಂಖ್ಯೆಯನ್ನು ಎಸ್.ಎಂ.ಎಸ್. ಕಳುಹಿಸಬೇಕಂತೆ, ಅದು ಇನ್ನೆಲ್ಲೋ ಒಂದು ಕಂಪ್ಯೂಟರ್‌ನಲ್ಲಿ ಬರುತ್ತದಂತೆ, ಯಾರೋ ಕುಳಿತುಕೊಂಡು ಆ ಕಂಪ್ಯೂಟರ್‌ನಲ್ಲಿ upload, download ಮಾಡುತ್ತಾರಂತೆ. ಕರೆಂಟ್ ಇರುವುದಿಲ್ಲ. Upload download ಆಗುವುದಿಲ್ಲ. ಇವರ ಹತ್ತಿರ ಮೊಬೈಲ್ ಇರುವುದಿಲ್ಲ. ಮೊಬೈಲ್ ಇಲ್ಲದೇ ಇರುವವರು ಏನು ಮಾಡುವುದು ಎಂದು ಕೇಳಿದರೆ ನಿಮ್ಮ friend ಮೊಬೈಲ್‌ನಲ್ಲಿ ಕಳುಹಿಸಬೇಕೆಂದು ಹೇಳುತ್ತಾರೆ. ಇದು ಯಾವ ಸೀಮೆ ಕಾನೂನು ?

ಅಧ್ಯಕ್ಷರು : ಅದು ಕಾನೂನು ಅಲ್ಲ. ಅದು ನಿಯಮ.

ಶ್ರೀ ವೈ.ಎಸ್.ವಿ. ದತ್ತ : ಹಳ್ಳಿ ರೈತರಿಗೆ ಇದರ ಗಂಧ ಗಾಳಿ ಗೊತ್ತಿಲ್ಲ. ಇಂತಹ ಕಥೆ ಗೊತ್ತಿಲ್ಲದಿರುವ ಹಳ್ಳಿ ರೈತರಿಗೆ ಇವೆಲ್ಲಾ ಮಾಡುತ್ತಾರೆ. ನಿನ್ನೆ ದಿವಸ ಆಹಾರ ಸಚಿವರು ಷರಿಷತ್ತಿನಲ್ಲಿ ಒಂದು ತೀರ್ಮಾನಕ್ಕೆ ಬರುತ್ತಾರೆ.

ಅಧ್ಯಕ್ಷರು : GO ಅನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿ.

ಶ್ರೀ ವೈ.ಎಸ್.ವಿ. ದತ್ತ : GO ಅನ್ನು ವಾಪಸ್ಸು ತೆಗೆದುಕೊಳ್ಳುವುದು ಅಷ್ಟೇ ಅಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಬಹಳಷ್ಟು ತೊಂದರೆ ಇದೆ. ಅದನ್ನು solve ಮಾಡುವುದಕ್ಕೆ ಆಗುತ್ತಿಲ್ಲ. ಈ ವಿಷಯದ ಬಗ್ಗೆ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ : ಇದು ಬಹಳ ವಿಶೇಷವಾಗಿ ಚರ್ಚೆಯಾಗಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ದಿನಕ್ಕೊಂದು Circular issue ಮಾಡುತ್ತಾರೆ. ಅದನ್ನು Withdraw ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಆರ್. ಅಶೋಕ್ : ರೇಷನ್ ಕಾರ್ಡ್ ಬಗ್ಗೆ. ಅನ್ನಭಾಗ್ಯ ಯೋಜನೆ ಬಗ್ಗೆ ಚರ್ಚೆ ಮಾಡಲು ಅರ್ಧ ಗಂಟೆ ಕಾಲ ಚರ್ಚೆ ಮಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ: ಸಾವಿರಾರು G.O ಗಳಿವೆ. ಹಳ್ಳಿ ರೈತರು ಬೈಯುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಆಹಾರ ಸಚಿವರಿಗೆ ತಮ್ಮ ನೀನು ಊರಿನ ಕಡೆಗೆ ಹೋಗಿದ್ದೀಯಾ ? ಎಂದು ಒಂದು ಬಾರಿ ಕೇಳಿದ್ದೆ.

ಶ್ರೀ ವೈ.ಎಸ್.ವಿ. ದತ್ತ: ಅವರು ಹಳ್ಳಿಯನ್ನೇ ನೋಡಿಲ್ಲ. ತಾಲ್ಲೂಕು ಕಛೇರಿಯನ್ನು ನೋಡಿಲ್ಲ. ಬೆಂಗಳೂರಿನಲ್ಲಿ ಗಾಂಧಿನಗರದಲ್ಲಿಂಯೇ ಕುಳಿತುಕೊಂಡಿರುತ್ತಾರೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ: ಇದು ಒಂದು G.O ಪ್ರಶ್ನೆ ಅಲ್ಲ. ಆಹಾರ ಇಲಾಖೆ ಸಾವಿರಾರು G.O ಅನ್ನು ಹೊರಡಿಸಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕೆಂದರೆ ಒಂದು ವಿಶೇಷವಾದಂತಹ ಅವಕಾಶ ಕೊಡಿ. ನಮ್ಮ ಹಳ್ಳಿ ಜನರ ಪ್ರಾಣ ಹಿಂಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಖಂಡಿತ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ. ನಿಯಮ 69 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟರೆ ಒಳ್ಳೆಯದು ಅರ್ಧ ಗಂಟೆ ಚರ್ಚೆಯಲ್ಲಿ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಖಂಡಿತ ಅವಕಾಶ ಕೊಡೋಣ. ಇನ್ನು 2–3 ದಿವಸದೊಳಗೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತ: ಮಾನ್ಯ ಅಧ್ಯಕ್ಷರೆ ನಿಯಮ 69 ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಕೊಡಿ. ಎಲ್ಲರೂ Participate ಮಾಡಲಿ.

(ಗೊಂದಲ)

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಈ ಗೊಂದಲ ಏನಿದೆ ಬಹಳ ವರ್ಷಗಳಿಂದ ನಡೆಯುತ್ತಿದೆ. ಒಂದು ಸದನ ಸಮಿತಿ ಮಾಡಲು ಸರ್ಕಾರಕ್ಕೆ ಹೇಳಿದರೆ ಒಳ್ಳೆಯದು.

(ಗೊಂದಲ)

ಅಧ್ಯಕ್ಷರು : ಮಾನ್ಯ ತನ್ವೀರ್ ಸೇಠ್‌ರವರೆ, ಈ ವಿಷಯ ತಮಗೆ ಬರುವುದಿಲ್ಲ. ಮಾನ್ಯ ದತ್ತರವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

ಶ್ರೀ ತನ್ವೀರ್ ಸೇಠ್ : ಒಂದು ಸದನ ಸಮಿತಿ ಮಾಡಿದಾಗ ಇವರು ಏನೇನು ನಿಯಮಾವಳಿಯನ್ನು ಮಾಡುತ್ತಿದ್ದಾರೆ, ಏನೇನು ಮಾರ್ಗಸೂಚಿಗಳನ್ನು ಮಾಡುತ್ತಿದ್ದಾರೆ ಎಂದು ನೋಡಬಹುದು.

(ಗೊಂದಲ)

ಅಧ್ಯಕ್ಷರು: ಈ ವಿಷಯ ತಮಗೆ ಬರುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ, ತಾವು ಹೇಗೆ ಪ್ರಶ್ನೆ ಮಾಡುತ್ತೀರಿ ?

(ಗೊಂದಲ)

ಶ್ರೀ ತನ್ವೀರ್ ಸೇಠ್: ಇವೆಲ್ಲ ಸರಿಪಡಿಸುವುದಕ್ಕೆ ಅವಕಾಶ ಕೊಡಬೇಕು.

(ಗೊಂದಲ)

ಅಧ್ಯಕ್ಷರು: ಇದನ್ನು ಚರ್ಚೆಗೆ ಹಾಕೋಣ. ಅದರಲ್ಲಿ ನೀವೂ ಭಾಗವಹಿಸಿ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ: ನಿಯಮ 69 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಖಂಡಿತ ಚರ್ಚೆ ಮಾಡೋಣ. ಮಾನ್ಯ ಬಣಕಾರ್‌ರವರು ಮಾತನಾಡುವುದು.

3. ವಿಷಯ: ವಸತಿ ಯೋಜನೆಯ ವಿವಿಧ ಯೋಜನೆಗಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ.

ಶ್ರೀ ಯು.ಬಿ.ಬಣಕಾರ್(ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, 2010–11ನೇ ಸಾಲಿನಿಂದ 2013–14ನೇ ಸಾಲಿನವರೆಗೆ ವಸತಿ ಯೋಜನೆಯ ವಿವಿಧ ಯೋಜನೆಗಳಲ್ಲಿ 351 ಮನೆಗಳು Not O.K. ಆದ ಕಾರಣದಿಂದ ಫಲಾನುಭವಿಗಳಿಗೆ ಹಣ ತಲುಪಿರುವುದಿಲ್ಲ. ನಿನ್ನೆ ದಿವಸ ಅವರುಗಳು ಹಿರೇಕೆರೂರು ತಾಲ್ಲೂಕು ಪಂಚಾಯಿತಿಯಲ್ಲಿ ಸತ್ಯಾಗ್ರಹವನ್ನು ಮಾಡಿ ಅಧಿಕಾರಿಗಳನ್ನು ಬಂಧನದಲ್ಲಿಟ್ಟಿದ್ದರು. ಆ ಕಾರಣದಿಂದ Not O.K.